# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 110/2017**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮನೋಹರ | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಮಾದೇಶ | **06.03.2021** |
| **ವಯಸ್ಸು** | ಃ **29** **ವರ್ಷ** | |
| **ವೃತ್ತಿ** | ಃ ಸೇಲ್ಸ್ ಎಕ್ಸಿಕ್ಯೂಟಿವ್ | **ಪ್ರಾ.ಸಾ. ಃ 15** |
| **ವಾಸಸ್ಥಳ** | ಃ ಒಂಟಿಕೊಪ್ಪಲು | **ಚಾ.ಸಾ. ಃ 24** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ನಾನು *2016* ರಲ್ಲಿ ಅಮೆಜಾನ್ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದೆ. ದಿನಾಂಕ *23.12.2016* ರಂದು ಅಮೆಜಾನ್ ನಿಂದ ಬಂದ ವಸ್ತುಗಳನ್ನು ಪಡೆದುಕೊಂಡು ವಿವಿ ಮೊಹಲ್ಲಾದಲ್ಲಿ ವಿಳಾಸಗಳನ್ನು ಹುಡುಕಿಕೊಂಡು ಟೆಂಪಲ್ ರಸ್ತೆಯಿಂದ *6* ನೇ ಮುಖ್ಯ ರಸ್ತೆಗೆ ನನ್ನ ಸ್ಕೂಟರ್ ನಲ್ಲಿ ಹೊಗುತ್ತಿದೆ. ಪೊಸ್ಟ ಆಫೀಸ್ ಹತ್ತಿರ *5* ಜನರು ಸಿಲ್ವರ್ ಬಣ್ಣದ ಕಾರಿನ ಹತ್ತಿರ ನಿಂತಿದ್ದರು. ಸದರಿ ವ್ಯಕ್ತಿಗಳ ಹೆಸರು ಸಂಜು, ಹೇಮಂತ, ದರ್ಮೆಂದ್ರ, ಮೂರ್ತಿ ಮತ್ತು ಸಂದೇಶ ಇದ್ದರು. ಸದರಿ ವ್ಯಕ್ತಿಗಳನ್ನು ನಾನು ನೋಡಿಕೊಂಡು ಮುಂದೆ ಹೋಗಿ *6* ನೇ ಮುಖ್ಯ ರಸ್ತೆಯಲ್ಲಿ ಇರುವ ಅಪಾರ್ಟಮೆಂಟ್ ಹತ್ತಿರ ವಿಳಾಸವನ್ನು ಕೆಳುವಾಗ ಹಿಂಬಾಗದಲ್ಲಿ ಅಪಘಾತ ಆದ ಶಬ್ದ ಕೇಳಿ ನಾನು ಹಿಂದೆ ತಿರುಗಿ ನೋಡಿದಾಗ ಕಾರಿನಿಂದ *5* ಜನರು ಇಳಿದಿದ್ದು ಜಲ್ಲಿಯ ಹತ್ತಿರ ಬಿದ್ದಿದ್ದ ವ್ಯಕ್ತಿಯ ಮೇಲೆ ಈ ಮೇಲೆ ಹೇಳಿದ *5* ಜನ ವ್ಯಕ್ತಿಗಳು ಮಚ್ಚಿನಿಂದ ಹಲ್ಲೆ ಮಾಡಿದ್ದಾರೆ. ಹಲ್ಲೆ ಮಾಡುವಾಗ ಸಂಜು ಕೈಯಲ್ಲಿ ಇದ್ದ ಮಚ್ಚು ಕೆಳಗೆ ಬಿದ್ದಿತ್ತು. ಸದರಿ ವ್ಯಕ್ತಿಗಳು ಕಾರು ಹತ್ತಿಕೊಂಡು ಮುಂದೆ ಹೋಗಿದ್ದಾರೆ.

*2.* ನಾನು ಹಲ್ಲೆಗೆ ಒಳಪಟ್ಟ ವ್ಯಕ್ತಿಯ ಹತ್ತಿರ ಹೋಗಿ ನೋಡಿದಾಗ ಸದರಿ ವ್ಯಕ್ತಿಯ ಮುಖದ ಮೇಲೆ ರಕ್ತ ಬರುತ್ತಿದ್ದು ನಾನು ಗಾಬರಿಯಿಂದ ನನ್ನ ಮನೆಯ ಕಡೆ ಹೋಗಿದ್ದೇನೆ. ನಂತರ ಹಲ್ಲೆಗೆ ಒಳಪಟ್ಟ ವ್ಯಕ್ತಿಯ ಹೆಸರು ಪಡುವಾರಹಳ್ಳಿಯ ಶ್ರೀ ಕೃಷ್ಣ ಎಂದು ತಿಳಿಯಿತು.

*3.* ದಿನಾಂಕ *26.12.2016* ರಂದು ನಾನು ಒಂಟಿಕೊಪ್ಪಲು ಪೋಲಿಸ ಠಾಣೆಯವರು ನನ್ನನ್ನು ಠಾಣೆಗೆ ಕರೆಸಿ ನನ್ನನ್ನು ವಿಚಾರಿಸಿದಾಗ ನಾನು ಘಟನೆಯನ್ನು ನೋಡಿದ ಬಗ್ಗೆ ಹೇಳಿದ್ದೇನೆ. ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿರುವುದಾಗಿ ಮತ್ತು ಗುರುತಿಸುವುದಾಗಿ ಪೊ.ಅಧಿಕಾರಿ ಸಮಕ್ಷಮ ಹೇಳಿದ ಮೇರೆಗೆ ಪೊ.ಅಧಿಕಾರಿ ನನ್ನ ಹೇಳಿಕೆಯ ಬಗ್ಗೆ ಖಾತ್ರಿ ಪಡಿಸಿಕೊಂಡು ರೂಂ ನಲ್ಲಿ ಇದ್ದ *5* ಜನ ವ್ಯಕ್ತಿಗಳನ್ನು ತೋರಿಸಿದ್ದು ನಾನು ಗುರುತಿಸಿ ಅವರ ಹೆಸರು ಹೇಳಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಇರುವ *2* ರಿದ *5* ನೇ ಆರೋಪಿಗಳನ್ನು ನೋಡಿ ಗುರುತಿಸಿದ್ದೇನೆ. *1* ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. *1* ಮತ್ತು *2* ರಿಂದ *5* ನೇ ಆರೋಪಿಗಳು ಕೃಷ್ಣ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಪೊ.ಅಧಿಕಾರಿ ನನ್ನ ಹೇಳಿಕೆ ಪಡೆದು ನನಗೆ ಓದಿ ಹೇಳಿ ನನ್ನ ಸಹಿ ಪಡೆದಿದ್ದಾರೆ.

*4.* ದಿನಾಂಕ *16.01.2017* ರಂದು ಕೋರ್ಟನಿಂದ ಬಂದ ವ್ಯಕ್ತಿ ದಿನಾಂಕ *17.01.2017* ನ್ಯಾಯಾಲಯಕ್ಕೆ ಹಾಜರು ಆಗುವಂತೆ ಹೇಳಿ ದಾಖಲೆಗೆ ಸಹಿ ಮಾಡಿಸಿಕೊಂಡ ಮೇರೆಗೆ ನಾನು ದಿನಾಂಕ *17.01.2017* ರಂದು ನ್ಯಾಯಾಲಯಕ್ಕೆ ಹಾಜರು ಆಗಿ ನ್ಯಾಯಾಧೀಶರ ಸಮಕ್ಷಮ ನಿಪಿ-*68* ರಂತೆ ಹೇಳಿಕೆ ಕೊಟ್ಟಿದ್ದೇನೆ. ನಿಪಿ-*68* *(ಎ)* ನನ್ನ ಸಹಿಯಾಗಿದೆ. ಸ್ಯಾಂಟ್ರೊ ಕಾರಿನ ಫೋಟೊವನ್ನು ನೋಡಿದರೆ ಗುರುತಿಸುತ್ತೇನೆ. ಇದನ್ನು ಈಗಾಗಲೇ ನಿಪಿ-*65* ರಂತೆ ಗುರುತಿಸಲಾಗಿದೆ.

<u>ಪಾಟೀಸವಾಲುಃ ಆರೋಪಿಗಳ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*